# ಬೆಳಗಾವಿ ಹುಡುಗಿಗೆ ಬೆಳಗುವ ಬಯಕೆ

**ಕಿರುತೆರೆಯ ಮೆಟ್ಟಿಲು ಹತ್ತಿ ಬೆಳ್ಳಿತೆರೆಗೆ ಕಾಲಿಟ್ಟಿರುವ ಶ್ರುತಿ ಪಾಟೀಲ ಅವರಿಗೆ ಹೋಮ್ಲಿ ಪಾತ್ರಗಳೆಂದರೆ ಇಷ್ಟ. ಹಾಗೆಂದು ಸವಾಲಿನ ಪಾತ್ರಗಳು ಹೇಗೇ ಇದ್ದರೂ ನಟಿಸುತ್ತೇನೆ ಎಂಬ ಛಲವೂ ಅವರಿಗಿದೆ.**

■ ಪದ್ಮನಾಭ ಭಟ್



ಶ್ರುತಿ ಪಾಟೀಲ ಬೆಳಗಾವಿಯ ಹುಡುಗಿ. ಆದರೆ ಅವರ ಮಾತಿನಲ್ಲಿ ಬೆಳಗಾವಿ ಕನ್ನಡದ ಸೊಗಡು ತುಸುವೂ ಇಣುಕುವುದಿಲ್ಲ. ಅಷ್ಟು ಬೇಗ ಬೆಂಗಳೂರು ಅವರನ್ನು ಬದಲಿಸಿಬಿಟ್ಟಿತೇ? ‘ಬೆಂಗಳೂರು ಬದಲಿಸಿದ್ದಲ್ಲ, ಪ್ರಯತ್ನಪೂರ್ವಕವಾಗಿ ಬದಲಿಸಿಕೊಂಡಿದ್ದು’ ಎನ್ನುತ್ತಾರೆ ಶ್ರುತಿ.

‘ನಾನು ಹುಟ್ಟಿದ್ದು, ಕಾಲೇಜಿನವರೆಗೆ ಓದಿದ್ದೆಲ್ಲ ಬೆಳಗಾವಿಯಲ್ಲಿಯೇ. ಬೆಂಗಳೂರಿಗೆ ಬಂದ ಹೊಸತರಲ್ಲಿ ನನಗೆ ತುಂಬ ಕಷ್ಟವಾಯ್ತು. ಆಡಿಷನ್‌ಗಳಿಗೆ ಹೋದಾಗ ನನಗೆ ಕೊಡುತ್ತಿದ್ದ ಡೈಲಾಗ್ ಉತ್ತರ ಕರ್ನಾಟಕ ಭಾಷೆಯಲ್ಲಿದ್ದರೆ ಸರಾಗವಾಗಿ ಹೇಳುತ್ತಿದ್ದೆ. ಅದೇ ಬೆಂಗಳೂರು ಕನ್ನಡದಲ್ಲಿದ್ದರೆ ಥರಥರ ನಡುಗಲಾರಂಭಿಸುತ್ತಿದ್ದೆ. ಯಾರ ಜೊತೆ ಮಾತಾಡಬೇಕಾದರೂ ಅವರು ಏನಂದುಕೊಳ್ಳುತ್ತಾರೋ ಎಂದು ಭಯವಾಗುತ್ತಿತ್ತು. ಹಾಗಾಗಿ ಪ್ರಯತ್ನಪೂರ್ವಕವಾಗಿ ಬೆಂಗಳೂರು ಕನ್ನಡ ರೂಢಿಸಿಕೊಳ್ಳಲಾರಂಭಿಸಿದೆ. ಬಸ್ ಕಂಡಕ್ಟರ್, ಕಾರ್ ಡ್ರೈವರ್, ಸ್ನೇಹಿತರು ಎಲ್ಲರೂ ಮಾತಾಡುವಾಗ ಅವರ ಮಾತನ್ನು ಮನಸಲ್ಲಿಯೇ ಪುನರುಚ್ಚರಿಸಿಕೊಳ್ಳುತ್ತಿದ್ದೆ. ಅದನ್ನು ಹೇಳಿಕೊಳ್ಳುತ್ತ ಹೇಳಿಕೊಳ್ಳುತ್ತಲೇ ನನಗೆ ಗೊತ್ತಿಲ್ಲದೇ ನಾನೂ ಬೆಂಗಳೂರು ಕನ್ನಡಕ್ಕೆ ಹೊಂದಿಕೊಳ್ಳಲಾರಂಭಿಸಿದೆ’ ಎಂದು ಹೇಳುತ್ತಾರೆ ಶ್ರುತಿ.

ಕಾಲೇಜು ದಿನಗಳಲ್ಲಿಯೇ ಮಾಡೆಲಿಂಗ್ ಬಗ್ಗೆ ಆಸಕ್ತಿ ಹೊಂದಿದ್ದ ಶ್ರುತಿ, ‘ಮಿಸ್ ಬೆಳಗಾವ್’ ಕಿರೀಟವನ್ನೂ ತನ್ನ ಮುಡಿಗೇರಿಸಿಕೊಂಡಿದ್ದರು. ನಂತರ ಶಿಕ್ಷಣದ ಬಗ್ಗೆ ಗಮನ ಕೇಂದ್ರೀಕರಿಸಿ, ಮಾಡೆಲಿಂಗ್, ನೃತ್ಯ ಎಲ್ಲವನ್ನೂ ತಾತ್ಕಾಲಿಕವಾಗಿ ಬಿಟ್ಟುಬಿಟ್ಟಿದ್ದರು.

ಶಿಕ್ಷಣದ ಉದ್ದೇಶದಿಂದಲೇ ಬೆಂಗಳೂರಿಗೆ ಬಂದಾಗ ಶ್ರುತಿ ಅವರ ನಟನೆಯ ಆಸಕ್ತಿ ಮತ್ತೆ ಮೊಳೆಯಿತು. ಅದಕ್ಕೆ ತಕ್ಕ ಹಾಗೆ ಅವರ ಅಣ್ಣನಿಂದಲೂ ಪ್ರೋತ್ಸಾಹ ಸಿಕ್ಕಿತು. ಅವಕಾಶ ಇದ್ದಲ್ಲೆಲ್ಲ ಹೋಗಿ ಆಡಿಷನ್ ಕೊಡುತ್ತಿದ್ದರು.

‘ಆಡಿಷನ್ ಕೊಡುತ್ತಲೇ ಇದ್ದ ನನಗೆ ಅವಕಾಶ ಸಿಕ್ಕಿದ್ದು ‘ಮಾಸನ ಸರೋವರ’ ಧಾರಾವಾಹಿಯಲ್ಲಿ. ಅದು ಶಿವರಾಜ್‌ಕುಮಾರ್ ನಿರ್ಮಾಣ ಮಾಡುತ್ತಿದ್ದ ಧಾರಾವಾಹಿ. ಮೊದಲ ಅವಕಾಶದಲ್ಲಿಯೇ ಅಂಥ ದೊಡ್ಡ ನಟನ ನಿರ್ಮಾಣದ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿದ್ದು ದೊಡ್ಡ ವಿಷಯವೇ. ಅಲ್ಲಿಂದ ಒಂದು ತಮಿಳು ಧಾರಾವಾಹಿಯಲ್ಲಿಯೂ ನಟಿಸುವ ಅವಕಾಶ ಸಿಕ್ಕಿತು’ ಎಂದು ತಮ್ಮ ನಟನಾ ಪಯಣ ಶುರುವಾದ ಬಗೆಯನ್ನು ಹೇಳುತ್ತಾರೆ ಶ್ರುತಿ.

ಶ್ರುತಿ ಸಿನಿಮಾಜಗತ್ತು ಪ್ರವೇಶಿಸಿದ್ದು ’ಮಿಸ್ಟರಿ ಆಫ್ ಮಂಜುಳ’ ಸಿನಿಮಾ ಮೂಲಕ. ಆ ಚಿತ್ರದಲ್ಲಿ ಅವರು ತಬಲಾ ನಾಣಿ ಅವರ ಮಗಳಾಗಿ ನಟಿಸಿದ್ದಾರೆ. ಅದು ಬಿಡುಗಡೆಗೂ ಸಜ್ಜಾಗಿದ್ದು ಸದ್ಯದಲ್ಲಿಯೇ ಟ್ರೈಲರ್ ಬಿಡುಗಡೆಯಾಗಲಿದೆ.